ನೀವು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೂ ಕೂಡ ತಾವು ಪದೇಪದೇ ಇದನ್ನೇ ಎತ್ತಿ, ಮಾನ್ಯಸಭಾಧ್ಯಕ್ಷರ ತೀರ್ಪನ್ನು ಉಲ್ಲಂಘನೆ ಮಾಡುತ್ತಿರತಕ್ಕ ರೀತಿಯಲ್ಲಿ ತಾವು ಮಾತನಾಡಿರುವುದಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ನಾನು ಹೇಳುತ್ತಿದ್ದೇನೆ. ತಾವು ಆಡಿರತಕ್ಕ ಮಾತುಗಳನ್ನು ಹಿಂದಕ್ಕೆ ಪಡೆದು, ತಾವು ವಿಷಾದವನ್ನು ವ್ಯಕ್ತಮಾಡಬೇಕಾಗುತ್ತದೆ. ಪುನಃ ಪುನಃ ಇದನ್ನು ಪುನರುಚ್ಚಾರ ಮಾಡುವುದಕ್ಕೆ, ಈ ಸದನದ ಸಮಯವನ್ನು ಎಳೆಯಬಾರದು. ದಯವಿಟ್ಟು ಆ ಕೆಲಸ ತಾವು ಮಾಡಿ.

ಶ್ರೀ ವೈಜನಾಥ ಪಾಟೀಲ್: ಇವತ್ತು ಸಾಯಂಕಾಲದ ಹೊತ್ತಿಗೆ, ನಿರ್ಣಯದ ಮೇಲೆ ಚರ್ಚೆ ಮುಗಿದ ನಂತರ, ಚೇರ್ ಒಂದುವೇಳೆ ಆಶ್ವಾಸನೆ ಕೊಟ್ಟಿದ್ದರೆ, ನಾನು ಈ ವಿಷಯವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಏಕೆಂದರೆ, ಇಲ್ಲಿ ಅವಕಾಶ ಇಲ್ಲವೆಂದರೆ, ಎಲ್ಲಿಯೂ ಸಿಗುವುದಿಲ್ಲ. ನಾವು ಸದಸ್ಯರಿದ್ದೇವೆ. ರೂಲಿಂಗ್ ಪಾರ್ಟಿ ಸದಸ್ಯರಿರಲಿ, ವಿರೋಧ ಪಕ್ಷದ ಸದಸ್ಯರಿರಲಿ. ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ, ನಾವು ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳುವುದಕ್ಕಾಗುತ್ತದೆಯೇ? ಇಲ್ಲಿ ಸರ್ಕಾರದ ಎದುರೇ ಈ ಸದನದಲ್ಲಿ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಸ್ಪೀಕರ್ ಅವರಿಗೆ, ಮನಸ್ಸಿಗೆ ಏನಾದರೂ ನೋವಾಗಿದ್ದರೆ, I regret for that.

ಶ್ರೀ ಹೆಚ್.ಎನ್.ನಂಜೇಗೌಡ: ಸಭಾಧ್ಯಕ್ಷರೇ, ಈ ಹಿಂದೆ, ಈ ಸದನದಲ್ಲಿ ಕಬ್ಬನ್ ಪಾರ್ಕ್ ವಿವಾದಕ್ಕೆ ಸಂಬಂಧಿಸಿದ ಹಾಗೆ ಚರ್ಚೆಯಾಗಿದೆ.

ಶ್ರೀ ವಸಂತ ವಿ ಸಾಲಿಯಾನ್: ಅಧ್ಯಕ್ಷರೇ, ಇದರ ಬಗ್ಗೆ ತಾವು ಹೇಗೆ...

ಅಧ್ಯಕ್ಷರು: ಪ್ರಿವಿಲೇಜ್, I have to permit..

(ಆ) ಕಬ್ಬನ ಪಾರ್ಕ್ ವಿಷಯದ ಬಗ್ಗೆ

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ನಾನು ಹೆಚ್ಚಿಗೆ ಟೈಮ್ ತೆಗೆದುಕೊಳ್ಳುವುದಿಲ್ಲ. ಸಬ್‌ಮಿಷನ್ ಮಾತ್ರ ಮಾಡುತ್ತೇನೆ. ಕಬ್ಬನ್ ಪಾರ್ಕ್ ವಿಷಯ ಇಲ್ಲಿ ಚರ್ಚೆಯಾಯಿತು. ಅದಾದ ನಂತರ, ತಮ್ಮ ಸರ್ವಸದಸ್ಯರ ತಿಳುವಳಿಕೆ ನಿಲುಕುವ ರೀತಿಯಲ್ಲಿ ತಾವು ಇಲ್ಲಿ ಆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ತದನಂತರ, ಇದೇ ವಿಚಾರಕ್ಕೆ ಹೈಕೋರ್ಟಿನ ನ್ಯಾಯಾಧೀಶರೊಬ್ಬರು, ಪ್ರೆಸ್ ಕ್ಲಬ್‌ಗೆ ಹೋಗಿ, ಪ್ರೆಸ್ ಕಾನ್‌ಫರೆನ್ಸ್ ಮಾಡುತ್ತಾರೆ. ಅದಾದ ಮೇಲೆ ಬೆಳಗಾಂಗೆ ಹೋಗಿದ್ದಾರೆ. ಅವರು ತಮ್ಮ ಚೇಂಬರ್ಸಿನಲ್ಲಿ ಕುಳಿತು ಮಾತನಾಡಿಲ್ಲ. ಆದರೆ, ಆರ್ಟಿಕಲ್ 194ರ ಪ್ರಕಾರ, ನಮಗೆ ಈ ಸದನದ ಸದಸ್ಯರಿಗೆ, ಈ ಸದನಕ್ಕೆ ಯಾರ ಹೆಸರು ಹೇಳಿದರೂ ಕೂಡ we have got complete

immunity. ಇದನ್ನು ಯಾರು ಪ್ರಶ್ನೆ ಮಾಡತಕ್ಕಂಥಾದ್ದಿಲ್ಲ. ಇದಕ್ಕೆ ಬೇಕಾದರೆ ಹತ್ತಾರು ಕೇಸುಗಳನ್ನು ಉದಾಹರಣೆ ಕೊಡುತ್ತೇನೆ. ಇವತ್ತು ಟೈಮಿಲ್ಲ, ಬೇಡ. ಆದರೆ, ಅವತ್ತು ಹೆಸರು ಹೇಳುವುದಕ್ಕಾಗಲಿಲ್ಲ. ಹೇಳುವುದಕ್ಕೆ ಕೆಲವರಿಗೆ ರುಚಿಸಲಿಲ್ಲ; ಇರಲಿ. ಅದು ಸತ್ಸಂಪ್ರದಾಯವಲ್ಲವೆಂಬದು ಕೆಲವರ ಅಭಿಪ್ರಾಯ. ಅದು ಅಭಿಪ್ರಾಯದ ಮಾತಾಯಿತು. ಈಗ ಪ್ರಿವಿಲೇಜ್ ನೋಟೀಸ್ ಕೊಟ್ಟಂಥ ಕಾಲದಲ್ಲಿ ನಾವುಗಳು ಹೆಸರು ಹಾಕಲೇಬೇಕಲ್ಲಾ. ಇಂತಹವರೇ ಹಕ್ಕುಚ್ಯುತಿ ಮಾಡಿದ್ದಾರೆ, ಸನ್ಮಾನ್ಯ ನ್ಯಾಯಮೂರ್ತಿ ಸಾಲ್ದಾನಾ ಅವರು. ಅವರು ನಮಗೆ, ಈ ಸದನದ ಸದಸ್ಯರಿಗೆ ಭಾರಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆ ಆಣಿಮುತ್ತುಗಳನ್ನು ಹಾಯ್ದು ಹೋಗುತ್ತೇವೆ. ಅವರದ್ದು ದೊಡ್ಡ ಭಾಷಣ. ತುಂಬಾ ದೊಡ್ಡದಾಗಿ ಭಾಷಣ ಮಾಡಿದ್ದಾರೆ. ಆ ಆಣಿಮುತ್ತುಗಳಲ್ಲಿ ಮೊದಲನೆಯದು, ನ್ಯಾಯಾಂಗದ ಮೇಲೆ ಧಾಳಿ ಮಾಡುವವರಿಗೆ ವಕೀಲರು ತಕ್ಕ ಉತ್ತರ ನೀಡಬೇಕು ಎಂದು ರಾಜ್ಯ ಹೈಕೋರ್ಟಿನ ನ್ಯಾಯಮೂರ್ತಿ ಎಂ.ಎಫ್.ಸಾಲ್ದಾನಾ ಇಂದು ಇಲ್ಲಿ ಕರೆ ನೀಡಿದರು. ಅಂದರೆ, ನಮಗೆ ನ್ಯಾಯಾಂಗದ ಬಗ್ಗೆ ಗೌರವ ಇಲ್ಲ ಎಂದು. ಈ ಸದನದ ಸರ್ವಸದಸ್ಯರಾಗಲೀ, ಸದನವಾಗಲೀ ನ್ಯಾಯಾಂಗದ ಬಗ್ಗೆ ಭಾರಿ ಗೌರವವನ್ನು ಇಟ್ಟುಕೊಂಡಿರತಕ್ಕ ಜನ ನಾವು. ಅಲ್ಲೊಬ್ಬರು, ಇಲ್ಲೊಬ್ಬರು ದಾರಿ ತಪ್ಪಿದಂಥ ಕಾಲದಲ್ಲಿ ಬುದ್ಧಿ ಹೇಳಲಿ. ಅದು ಬಿಟ್ಟು ನ್ಯಾಯಾಂಗದ ಹೆಸರಿನಲ್ಲಿ ಇಡೀ ಸಮೂಹದ ಹೆಸರನ್ನು ತಮ್ಮ ಸ್ವಹಿತಕ್ಕಾಗಿ ಬಳಸಿಕೊಂಡರೆ ಹೇಗೆ?

12.40 ಪಿಎಂ

ಇದು ಒಂದು ಆಣಿ ಮುತ್ತು. ಎರಡನೆಯದು ನ್ಯಾಯಾಂಗದ ಮೇಲೆ ಇತ್ತೀಚೆಗೆ ಧಾಳಿ ಹೆಚ್ಚುತ್ತಿದೆ. ಇದು ಅತ್ಯಂತ ಆತಂಕದ ಸಂಗತಿ. ಆದರೆ ಈ ಟೀಕೆ ಮಾಡುವವರಿಗೆ ಇರುವ ಅರ್ಹತೆಯಾದರೂ ಏನು? ಏನು ನಿಮ್ಮ ಅರ್ಹತೆ? ಇದೊಂದು ಎರಡನೇ ಆಣಿ ಮುತ್ತು. ನ್ಯಾಯಾಂಗದ ಮೇಲೆ ಧಾಳಿ ಮಾಡುವವರ ಅರ್ಹತೆಯಾದರೂ ಏನು? ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿಭಾಯಿಸುತ್ತಿದ್ದಾರೆಯೇ? ಸಾರ್ವಜನಿಕ ಹಣವನ್ನು ಸರಿಯಾಗಿ ಬಳುಸುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು. ನ್ಯಾಯಮೂರ್ತಿಗಳು, ಇದಂತೂ ಬಾರಿ ಪ್ರಮುಖವಾದುದು. ಈಗ ಶಾಸಕಾಂಗ ಅಂಗೀಕರಿಸುವ ಮಸೂದೆಗಳ ಮಟ್ಟ ಭಯಾನಕವಾಗಿದೆ. ಯಾರಾದರೂ ಈ ಪ್ರಜಾಪ್ರಭುತ್ವದಲ್ಲಿ ಚುನಾಯಿತ ಸಭೆಗಳಲ್ಲಿ, ಇಂತಹ ಸದನಗಳಲ್ಲಿ ಸದಸ್ಯರಾಗಿರತಕ್ಕಂಥವರು ಇದನ್ನು ನೋಡಿ ಏನಾಗಬೇಕು? ಭಯಾನಕವಾಗಿದೆ. ನಾವು ಮಾಡುವ ಕಾನೂನು ಸರಿಯಾಗಿಲ್ಲ. ನಾವು ಕಾನೂನು ಮಾಡುವುದಕ್ಕೆ ನಾಲಾಯಕ್ ಜನ ಎಂದು ಇವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಎರಡು ವಿಚಾರಗಳನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರುತ್ತೇನೆ. ನಾನು ಆ ಕೇಸ್‌ಗಳ ವಿವರ ಹೇಳುವುದಕ್ಕೆ ಹೋಗುವುದಿಲ್ಲ. ಅದೆಲ್ಲಾ

ಇಲ್ಲಿ ಇದೆ. ನಾನು ಸಮಯ ಬಂದಾಗ ಹೇಳುತ್ತೇನೆ. ಸನ್ಮಾನ್ಯ ಸದಸ್ಯರ ನೆನಪಿಗೆ. ಬಹುಶಃ ಸಾಧ್ಯವಾದರೆ ಅವರೂ ಸಹ ಮೆಲುಕು ಹಾಕಿ ಫರ್‌ದರ್ ರೆಫರೆನ್ಸ್‌ಗೆ ಬೇಕಾದರೆ ಓದಿಕೊಳ್ಳಲಿ. ಯು.ಪಿ.ಯಲ್ಲಿ ಕೇಶವಸಿಂಗ್ ಎನ್ನುವವರ ಕೇಸ್. ಆ ಸದಸ್ಯರ ಬಗ್ಗೆ ಪತ್ರಿಕೆಯವರು ಒಂದು ಅವಹೇಳನಕರವಾದಂತಹ ಒಂದು ಲೇಖನ ಬರೆಯುತ್ತಾರೆ. ಅವರು ಒಂದು ಹಕ್ಕುಚ್ಯುತಿಯಾಗಿದೆ ಎಂದು ಹೇಳಿ, ಸಭಾಧ್ಯಕ್ಷರಿಗೆ ನೋಟೀಸ್ ಕೊಡುತ್ತಾರೆ. ಮಾನ್ಯ ಸಭಾಧ್ಯಕ್ಷರು ಅದನ್ನು ಹಕ್ಕುಚ್ಯುತಿ ನಿರ್ಣಯದ ಸಮಿತಿಗೆ ಕಳುಹಿಸಲಿಲ್ಲ. ಮೊನ್ನೆ ತಾವು ಕೃಪೆ ತೋರಿ ಅದನ್ನು ಹಕ್ಕುಚ್ಯುತಿ ನಿರ್ಣಯದ ಸಮಿತಿಗೆ ಕಳುಹಿಸಿದಿರಿ. ಶ್ರೀ ಜಾರ್ಜ್ ಅವರದ್ದು. ಆದರೆ ಅವರು ಏನು ಮಾಡಿದರು ಗೊತ್ತೇನು? ಆತನನ್ನು ಅರೆಸ್ಟ್ ಮಾಡಿ ಕರೆದುಕೊಂಡು ಬನ್ನಿ ಎಂದು ವಾರೆಂಟ್ ಇಶ್ಯೂ ಮಾಡಿದರು. 'He will have to receive punishment here.' ಎಂದು ಹೇಳಿ. ಆತ ಆಮೇಲೆ ಏನು ಮಾಡಿದ ಅಂದರೆ ಒಬ್ಬ ಲಾಯರ್ ಅನ್ನು ಇಟ್ಟುಕೊಂಡು ಸಿಂಗಲ್ ಜಡ್ಜ್ ಕೋರ್ಟಿಗೆ ಹೋದರು. ಆ ಕೋರ್ಟ್‌ನವರು ಸ್ಟೇ ಕೊಟ್ಟರು. ಅದಕ್ಕೆ ಸ್ಪೀಕರ್ ಏನು ಮಾಡಿದರು ಗೊತ್ತೇನು. ಆ ಲಾಯರ್, ಆ ಜಡ್ಜ್, ಈ ಲೇಖನವನ್ನು ಬರೆದವರು, ಮೂರು ಜನರನ್ನು ಸೇರಿಸಿ ವಾರೆಂಟ್ ಇಶ್ಯೂ ಮಾಡಿದರು. ಆ ಮೂರು ಜನ ಬಂದು ಇದು ಈ ಸದನದ ಹಕ್ಕುಚ್ಯುತಿ ಆಗಿದೆ, Contempt of the House, interference with the sovereignty of the House, ಎಂದು ಹೇಳಿ, 3 ಜನರಿಗೂ ನೋಟಿಸ್ ಕೊಟ್ಟರು. ವಾರೆಂಟ್ ಇಶ್ಯೂ ಮಾಡಿದರು. ಆಮೇಲೆ ಅವರು ಡಿವಿಜನ್ ಬೆಂಚ್‌ಗೆ ಹೋದರು. ಡಿವಿಜನ್ ಬೆಂಚ್‌ನವರು ಪುನಃ ಆ ಸ್ಟೇ ಆರ್ಡರ್ ಅನ್ನು ಕನ್‌ಫರ್‌ಮ್ ಮಾಡಿದರು. ಆಮೇಲೆ ಸ್ಪೀಕರ್ ಏನು ಮಾಡಿದರು ಅಂದರೆ ಆ ಡಿವಿಜನ್ ಬೆಂಚ್‌ನವರನ್ನು ಸೇರಿಸಿ ವಾರೆಂಟ್ ಇಶ್ಯೂ ಮಾಡಿದರು, ನೀವೆಲ್ಲಾ ಬಂದು ಪನಿಶ್‌ಮೆಂಟ್ ರಿಸೀವ್ ಮಾಡಿ ಎಂದು. ಆಮೇಲೆ 17 ಜನ ಫುಲ್ ಬೆಂಚ್‌ಗೆ ಹೋಯಿತು. ಯು.ಪಿ.ಯಲ್ಲಿ ಅವರು ಆಮೇಲೆ ಸ್ವಲ್ಪ ಟೈಮ್ ತೆಗೆದುಕೊಂಡು, ಅವರು ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿ ಇದರ ಬಗ್ಗೆ ಒಪೀನಿಯನ್ ತೆಗೆದುಕೊಳ್ಳಿ ಸುಪ್ರೀಂ ಕೋರ್ಟ್‌ನಿಂದ ನಮಗೆ ಒಂದು ತೀರ್ಪು ಕೊಡಿಸಿ ಎಂದು ಕೇಳಿಕೊಂಡರು. ಆ ತೀರ್ಪು ಇರಲಿ, ಆ ತೀರ್ಪು ಅನೇಕ ರೀತಿ ಆಗಿದೆ. ಅದರಲ್ಲಿ ಸದನದ ಸಾರ್ವಭೌಮತ್ವವನ್ನು ಎತ್ತಿ ಹಿಡಿದಿದ್ದಾರೆ. ಸದಸ್ಯರ ಸಾರ್ವಭೌಮತ್ವವನ್ನು ಎತ್ತಿ ಹಿಡಿದಿದ್ದಾರೆ. ಏಕೆಂದರೆ ಇದರ ಚಾರಿತ್ರಿಕ ಹಿನ್ನೆಲೆ ಈ ಜಡ್ಜ್‌ಗಳಿಗೆ ಗೊತ್ತಿಲ್ಲ. ಹಿಂದೆ ಹೈಕೋರ್ಟ್ ಪೋರ್ಸ್ ಎಲ್ಲಾ ಪಾರ್ಲಿಮೆಂಟ್‌ನಲ್ಲಿಯೇ ಇತ್ತು. ಹೌಸ್ ಆಫ್ ಕಾಮನ್ಸ್, ಹೌಸ್ ಆಫ್ ಲಾರ್ಡ್ಸ್, ಅಲ್ಲಿದ್ದವರೇ ಅಲ್ಲಿ ಜಡ್ಜ್‌ಮೆಂಟ್ ಹೇಳುವಂತಹವರು ಆಗಿದ್ದರು. ಕೊನೆ ಕೊನೆಗೆ ಕೆಲಸದ ಒತ್ತಡದಿಂದ ಕೆಲವು ಕರ್ತವ್ಯಗಳನ್ನು ಬೇರೆ ಮಾಡಿದರು. ಪ್ರಿವಿಲೇಜಸ್ ಯಾವುದನ್ನೂ ಟ್ರಾನ್ಸ್‌ಫರ್ ಮಾಡಲಿಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕು. ಇವತ್ತು ಹೈಕೋರ್ಟ್ ಜಡ್ಜ್‌ಗಳಿಗೆ ಯಾವುದೇ ಪ್ರಿವಿಲೇಜಸ್

ಇಲ್ಲ. ಎಕ್ಸೆಪ್ಟ್ 211. ಅದರ ಸ್ಕೋಪ್ ಎಷ್ಟು ಲಿಮಿಟೆಡ್ ಎನ್ನುವುದನ್ನು ನಾನು ಸಮಯ ಬಂದಾಗ ಹೇಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಇ ಎಸ್ ವೆಂಕಟರಾಮಯ್ಯನವರೇ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಎ.ಕೆ.ಸುಬ್ಬಯ್ಯ ವರ್‌ಸಸ್ ಲೆಜಿಸ್ಲೇಟೀವ್ ಕೌನ್ಸಿಲ್ ಇದರಲ್ಲಿ. ಇವೆಲ್ಲಾ ಇರತಕ್ಕಂಥ ಸ್ಥಿತಿಯಲ್ಲಿ ಇನ್ನೂ ಏನೇನೋ ಆಗಿದೆ. ಡಾಕ್ಟರ್ ಫರೂಕ್ ಅಬ್ದುಲ್ಲಾ, ಮುಖ್ಯಮಂತ್ರಿಯಾಗಿದ್ದಾಗ ಸುಪ್ರೀಂಕೋರ್ಟ್ ತೀರ್ಪುಗಳು, ಹೈಕೋರ್ಟ್ ತೀರ್ಪುಗಳು ಮಾರಾಟಕ್ಕೆ ಇವೆ ಎಂದು ಹೇಳಿಬಿಟ್ಟರು. ನಾನು ಹೇಳುವುದಲ್ಲ. ಸುಪ್ರೀಂ ಕೋರ್ಟ್‌ನವರು ಅವರ ಮೇಲೆ ಕಂಟೆಂಪ್ಟ್ ಕೇಸ್ ರಿಜಿಸ್ಟರ್ ಮಾಡಿಕೊಂಡರು. ನೋಟಿಸ್ ಕೊಟ್ಟರು ರಿಸೀವ್ ಮಾಡಲಿಲ್ಲ. ಅವರ ಸರ್ಕಾರದ ಕಾರ್ಯದರ್ಶಿಗೆ ನೋಟಿಸ್ ಕೊಟ್ಟರು, ಮೊದಲನೇ ದಿನ ಅಟೆಂಡ್ ಆದರು. ಎರಡನೇದಿನ ವಿತ್‌ಡ್ರಾ ಆದರು. ನಾನು ವಾದ ಮಾಡುವುದಿಲ್ಲ ಏನಾದರೂ ಮಾಡಿಕೊಳ್ಳಿ ಎಂದು. ಆಗ ಕೋರ್ಟ್ ನಿಸ್ಸಹಾಯಕವಾಯಿತು. ಎಕ್ಸ್‌ಪಾರ್ಟಿ ಆಗಿ, ಅವರು ಏನೂ ಬರೆಯುವುದಕ್ಕೆ ಆಗದಂತಹ ಸ್ಥಿತಿ ಆಯಿತು. ಈ ರಾಷ್ಟ್ರದಲ್ಲಿ, ಚುನಾಯಿತ ಪ್ರತಿನಿಧಿಗಳನ್ನು ಇಷ್ಟೊಂದು ಲಘುವಾಗಿ ಕಾಣತಕ್ಕಂಥ ಜಡ್ಜ್‌ಗಳನ್ನು ಹೀಗೆ ಬಿಡುವುದಕ್ಕೆ ಆಗುವುದಿಲ್ಲ. ಇವರನ್ನು ಇಂಪೀಚ್ ಮಾಡಿ ಎಂದೂ ಸಹ ನಾವು ಶಿಫಾರಸ್ಸು ಮಾಡಬೇಕಾಗುತ್ತದೆ. ಇವರನ್ನು ರಿಮೂವ್ ಮಾಡಿ ಎಂದು ನಾವು ನಿರ್ಣಯ ಮಾಡಿ ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಬೇಕಾಗುತ್ತದೆ. ಇವರನ್ನು ಇಷ್ಟಕ್ಕೇ ಬಿಟ್ಟರೆ ಆಗುವುದಿಲ್ಲ, ಇದೇನು ನಮ್ಮ ಮೇಲೆ ಎತ್ತಿಕಟ್ಟತಕ್ಕಂಥಾದ್ದು, ನಾವು ಎಲ್ಲಿಗೆ ತಲುಪುತ್ತೇವೆ ಇಂತಹ ಜಡ್ಜ್‌ಗಳನ್ನು ಇಟ್ಟುಕೊಂಡರೆ. ನಾನು ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ. ಇದು ವಿವರವಾಗಿ ಚರ್ಚೆ ಆಗಬೇಕು. ಇವರಿಗೆ ಇರುವ ಇತಿಮಿತಿ ಏನು? ಇವರಿಗೆ ಇರುವ ಪ್ರಿವಿಲೇಜಸ್ ಏನು? ನಮಗೆ ಇರುವ ಪ್ರಿವಿಲೇಜಸ್ ಏನು? ಈ ಸಭೆ ಅಂದರೆ ಏನು? ನಾವು ಮಾಡತಕ್ಕಂಥ ಕಾನೂನುಗಳ ಬಗ್ಗೆ ಇಷ್ಟು ಲಘುವಾಗಿ ದೇವರೇ ಕಾಪಾಡಬೇಕು, ಭಯಾನಕ, ನಾವು ಮಾಡತಕ್ಕಂಥ ಕಾನೂನು ಇಂತಹ ಜಡ್ಜ್‌ಗಳಿಗೆ ಭಯಾನಕ. ಇವರು ಸಮಾಜ ಸುಧಾರಕರು ಆಗಬೇಕಂತೆ. ಅದನ್ನು ಹೇಳಿದ್ದಾರೆ. ನಾವು ಸಮಾಜ ಸುಧಾರಕರು ಆದರೆ ತಪ್ಪೇನು ಎಂದು? ಸಮಾಜ ಸುಧಾರಣೆ ಮಾಡಬೇಕು ಇವರು. ಜಡ್ಜ್‌ಗಳು ಆರ್ಡರ್ ಮಾಡುತ್ತಾರೆ ಅಧ್ಯಕ್ಷರೇ. Can a Judge pass a decree or an order which cannot be executed? Elementary principle of law, ಒಬ್ಬ ಜಡ್ಜ್ ಆರ್ಡರ್ ಮಾಡುತ್ತಾರೆ, ಹೈಕೋರ್ಟ್ ಜಡ್ಜ್. ಇಂತಹ ತಾರೀಖಿನಿಂದ ರಿಕ್ಷಾಗಳು ಬೆಂಗಳೂರು ರಸ್ತೆಯಲ್ಲಿ ಓಡಾಡುವುದಿಲ್ಲ.

ಅಧ್ಯಕ್ಷರು: ಈಗ ಡಿಟೇಲ್ಸ್‌ಗೆ ಹೋಗುವುದು ಬೇಡ.

ಶ್ರೀ ಎಚ್.ಎನ್.ನಂಜೇಗೌಡ: ಆಗಿ ಹೋಯಿತು. ನಾನು ಹೇಳುವುದು ಆ

ತಾರೀಖು ಆಗಿ ಹೋಯಿತು. ರಸ್ತೆಗಳ ಮೇಲೆ ರಿಕ್ವಾಗಳು ಇವೆ. ನಾನು ಹೇಳುತ್ತಿರುವುದು ಯಾವ ರೀತಿಯಲ್ಲಿ ಜುಡಿಷಿರಿಯಲ್ಲಿ, ಈ ಗುಣಮಟ್ಟ ಇಳಿಮುಖವಾಗುತ್ತಿದೆ ಇದಕ್ಕಾಗಿ ತಾವು ಸಂಪೂರ್ಣವಾಗಿ ನಮ್ಮ ಸ್ನೇಹಿತರು ಅನೇಕರು ಮಾತನಾಡುವವರಿದ್ದಾರೆ. ಎಲ್ಲರೂ ಎಜಿಟೇಟ್ ಆಗಿದ್ದಾರೆ. ಇದು ವಿವರವಾಗಿ ಚರ್ಚೆ ಆಗಬೇಕಾಗುತ್ತದೆ. ಅವರ ಇತಿಮಿತಿಯನ್ನು ನಾವು ಹೇಳಿ ಲಕ್ಷ್ಮಣ ರೇಖೆಯನ್ನು ನಾವು ದಾಟದ್ದೇವೆಯೋ ಅವರು ದಾಟುತ್ತಿದ್ದಾರೋ ಎನ್ನುವುದನ್ನು ಯಾರು ಲಕ್ಷ್ಮಣ ರೇಖೆಯನ್ನು ದಾಟುತ್ತೇವೆಂದು ಹೇಳುತ್ತಾರೋ ಅವರಿಗೂ ತಿಳಿಸೋಣ ವಿನಯವಾಗಿ. ನೋಡಿಯಪ್ಪ ನಾವು ದಾಟಿರುವುದು ಇಷ್ಟು, ಅವರು ದಾಟಿರುವುದು ಇಷ್ಟು ಎಂದು ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ನಿನ್ನೆ ಬೆಳಗಾಂನಲ್ಲಿ ನ್ಯಾಯಮೂರ್ತಿಗಳಾದ ಶ್ರೀಮಾನ್ ಸಾಲ್ದಾನರವರು ಹೇಳಿರುವ ಬಗ್ಗೆ ನಾನು ಅದನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಅವರ ಬಗ್ಗೆ ಬಹಳ ಗೌರವ. ನ್ಯಾಯಮೂರ್ತಿಗಳ ತೀರ್ಪಿನ ಬಗ್ಗೆ ನಾವು ಇಲ್ಲಿ ಚರ್ಚೆ ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಇರುವ ಪ್ರಶ್ನೆ ಏನೆಂದರೆ ಅವರ ಪ್ರತಿ ವಾಕ್ಯವೂ ನೇರವಾಗಿ ಶಾಸಕಾಂಗದ ಮೇಲೆ ವಕೀಲರು ಬಹಿರಂಗವಾಗಿ ಮೇಲೆ ಬೀಳಬೇಕೆಂದು ಹೇಳಿ ಒಂದು ರೀತಿಯಲ್ಲಿ ಎತ್ತಿ ಕಟ್ಟಿದ್ದಾರೆ. ಅವರು ಈ ವಾದ ವಿವಾದವನ್ನು ನಾಲ್ಕು ಇತಿಮಿತಿಗಳಲ್ಲಿ ಅವರದ್ದೇ ಆದ ನ್ಯಾಯಾಲಯದಲ್ಲಿ ಈ ತರಹ ಯಾವುದಾದರೊಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಬಂದಾಗ ಅದರ ಮೇಲೆ ಅವರು ಚರ್ಚೆ ಮಾಡಬಹುದೇ ಹೊರತು ಸಾರ್ವಜನಿಕ ವೇದಿಕೆಗೆ ಬಂದು ಈ ರೀತಿ ರಾಜಕಾರಣಿಗಳ ರೀತಿ ಮಾತನಾಡಬಾರದು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಇದನ್ನು ತೀರ್ಮಾನ ಮಾಡಬೇಕು. ಈ ನಾಡಿನ ಬಹಳ ಹಿರಿಯರು, ಪ್ರಾಜ್ಞರು, ಅವರು ತೀರ್ಮಾನ ಮಾಡಬೇಕು. ಅವರು ಅನೇಕ ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಕೊಟ್ಟಿದ್ದಾರೆ. ಅವರಲ್ಲಿ ನಾನು ಮನವಿ ಮಾಡುತ್ತೇನೆ, ಸಾಲ್ದಾನ ಅವರ ವರ್ತನೆ ಮೊದಲನೆಯದು ಅವರು ಪ್ರೆಸ್‌ಕ್ಲಬ್‌ಗೆ ಬರಬಹುದೇ ಎನ್ನತಕ್ಕಂಥಾದ್ದು. ಬಹಿರಂಗ ಚರ್ಚೆಗೆ. ನಾವು ರಾಜಕಾರಣಿಗಳು. ನಮಗೆ ಶಾಸನಸಭೆ ಇದೆ. ಶಾಸನ ಸಭೆಯಲ್ಲಿ ನಾವು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ನನಗೂ ಗೊತ್ತಿದೆ ನ್ಯಾಯಾಂಗ, ಕಾರ್ಯಾಂಗ, ಮತ್ತು ಶಾಸಕಾಂಗ. ಇದರಲ್ಲಿ ಅವರದ್ದೇ ಆದಂತಹ ವ್ಯಕ್ತಿತ್ವ ಇರತಕ್ಕಂಥಾದ್ದು ಇದೆ. ಒಂದಕ್ಕಿಂತ ಒಂದು ಘರ್ಷಣೆ ಶುರುವಾದಾಗ ಅನಾಯಕತ್ವವು ಆರಂಭವಾಗುತ್ತದೆ. ಈ ಘರ್ಷಣೆಗೆ ಕಾರಣ ಯಾರು ಎನ್ನತಕ್ಕಂಥಾದ್ದರ ಬಗ್ಗೆಯೂ ನಾವು ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕಾಗಿದೆ. ನಮ್ಮಲ್ಲಿ ಏನೇನು ಚರ್ಚೆ ನಡೆದಿದೆ, ಆ ಚರ್ಚೆಯ ಸಂದರ್ಭದಲ್ಲಿ ಬಳಸಿರತಕ್ಕಂಥಾ ಭಾಷೆಗಳು ಯಾವುದೇ

ಇದ್ದರೂ ಸಹ ಅದರ ಬಗ್ಗೆ ಅವರು ಹೇಳಲಿ. ಈ ತರಹದ ಭಾಷೆ ತಾವು ಬಳಸಿದ್ದೀರಿ, ಈ ಬಗ್ಗೆ ನಮ್ಮನ್ನು ಆಕ್ಷೇಪಣೆ ಮಾಡಿದ್ದಾರೆ. ಅದರ ಬಗ್ಗೆ ನಾವು ಚರ್ಚೆ ಮಾಡೋಣ ಎನ್ನತಕ್ಕಂಥ ವಿಷಯವನ್ನು ಅವರದ್ದೇ ಆದಂತಹ ಇತಿಮಿತಿಯಾದಂತಹ ವ್ಯವಸ್ಥೆ ಅವರಿಗೆ ಇದೆ. ಆದರೆ ಅವರು ಬಹಿರಂಗವಾಗಿ ನೇರವಾಗಿ ಪ್ರೆಸ್ ಕ್ಲಬ್‌ಗೆ ಬಂದು ಭಾಷಣ ಮಾಡಿದ್ದಾರೆ. ಬೆಳಗಾವಿಯಲ್ಲಿ ಅವರು ಒಂದು ರೀತಿಯಲ್ಲಿ ನೇರವಾಗಿ ಯುದ್ಧವನ್ನು ಬಹಿರಂಗವಾಗಿ ಶಾಸನ ಸಭೆಯ ಮೇಲೆ ಘೋಷಣೆ ಮಾಡಿದ್ದಾರೆ. ಆ ದೃಷ್ಟಿಯಿಂದ ಶಾಸನ ಸಭೆಯ ಹಕ್ಕಿಗೆ ಒಬ್ಬ ಸದಸ್ಯರ ಹಕ್ಕಿಗೆ ಚ್ಯುತಿ ಅಲ್ಲ ಇಡೀ ಸದನದ ಹಕ್ಕಿಗೆ ಚ್ಯುತಿ, ಸದಸ್ಯರ ಎಲ್ಲರ ಕರ್ತವ್ಯಕ್ಕೆ ಅವರು ಚ್ಯುತಿ ತಂದಿದ್ದಾರೆ. ನಾವು ಮಾಡತಕ್ಕಂಥ ಎಲ್ಲಾ ಮಸೂದೆಗಳ ಮೇಲೆ ಬಿದ್ದಿದ್ದಾರೆ. ಮಸೂದೆಗಳು ಸರಿಯಾಗಿ ಮಾಡಿಲ್ಲ ಎಂದು ಹೇಳಿರುವಂತಾದ್ದನ್ನು ನೋಡಿದರೆ ನಾವು ಇದುವರೆಗೂ ಮಾಡಿರತಕ್ಕಂಥ ಮಸೂದೆಗಳು, ಸಾರ್ವಜನಿಕ ಹಿತದ ಬಗ್ಗೆ, ಸಾರ್ವಜನಿಕ ಹಿತಚಿಂತನೆ ಬಗ್ಗೆ ಮಾಡಿರತಕ್ಕಂಥ ಮಸೂದೆಗಳು ಸರಿಯಾಗಿಲ್ಲ ಎಂದು ಹೇಳಿದ್ದಾರೆ. ನಾವು ಅವರನ್ನು ವೈಯಕ್ತಿಕವಾಗಿ ದೂಷಣೆ ಮಾಡುವುದಿಲ್ಲ. ಅವರ ತೀರ್ಪಿನ ಬಗ್ಗೆ ನಾವು ದೂಷಣೆ ಮಾಡುವುದಿಲ್ಲ. ತಾವು ಈ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಿರತಕ್ಕಂಥ ಹೇಳಿಕೆ ಹಕ್ಕುಚ್ಯುತಿ ನಿರ್ಣಯವನ್ನು ಯಾರ ಮೇಲೆ ಮಂಡಿಸುತ್ತಾರೋ ಅವರ ಹೇಳಿಕೆಯನ್ನು ಪತ್ರಿಕೆಯಲ್ಲಿ ನೋಡಿದಾಗ ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಜೀವನದಲ್ಲಿ ನಾವು ಕೆಲಸ ಮಾಡುವುದು ಬಹುಶಃ ಕಷ್ಟವಾಗುತ್ತದೆ. ಜನರಿಗೆ ಪತ್ರಿಕೆಯ ಮೂಲಕ ಹೋಗಿರತಕ್ಕಂಥ ಸಂದೇಶವು ಏನಿದೆ ಅಂದರೆ, ಅದರ ಜೊತೆಗೆ ಶಾಸಕಾಂಗದ ಇತಿಮಿತಿಯಾದ ಸಾರ್ವಭೌಮ್ಯತೆ, ಅದೇ ರೀತಿಯಲ್ಲಿ ನ್ಯಾಯಾಂಗದ ಇತಿಮಿತಿ ಮತ್ತು ಅದರ ಸಾರ್ವಭೌಮ್ಯತೆ ಏನು ಎಂಬ ವಿಚಾರದಲ್ಲಿ ಈಗಾಗಲೇ ಸಂವಿಧಾನವು ನಿರ್ದಿಷ್ಟಪಡಿಸಿರತಕ್ಕಂಥ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ಎನ್‌ಕ್ರೋಚ್ ಮಾಡಿರತಕ್ಕಂತ ಸಂದರ್ಭದಲ್ಲಿ ಅದು ಚರ್ಚೆಯಾಗಬೇಕಾಗುತ್ತದೆ. ವಿಧಾನಸಭೆಯಲ್ಲಿ ಶಾಸಕರಾಗಿರತಕ್ಕಂಥವರು ಕಾನೂನು ಮಾಡುವುದಕ್ಕೆ ಅವರ ಹಕ್ಕಿನ ಜೊತೆಗೆ ಇಡೀ ಶಾಸಕಾಂಗವನ್ನು ಸಮಗ್ರವಾಗಿ ಟೀಕೆ ಮಾಡಿರತಕ್ಕಂಥಾದ್ದರ ಸಂದೇಶವು ಬಹುಶಃ ನಮ್ಮೆಲ್ಲರನ್ನೂ ಕೂಡ ಪ್ರಶ್ನಿಸಿರತಕ್ಕಂಥಾದ್ದು ಆಗಿದೆ. ನಮ್ಮೆಲ್ಲರ ಹಕ್ಕುಚ್ಯುತಿಗೆ ಒಳಪಡುವ ವಿಷಯ ಬಂದಾಗ, ಆ ಮಟ್ಟಕ್ಕೆ ಯಾವುದೇ ಹೇಳಿಕೆಗಳು ಬಂದಾಗ ನಾವು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಸೂಕ್ತ. ತಮಗೆ ವಿಶೇಷವಾದಂಥ ಅಧಿಕಾರ ಇದೆ. ಇದು ಬಹಳ ಪ್ರಾಮುಖ್ಯವಾದ ವಿಚಾರವಾದುದರಿಂದ ಇದು ಚರ್ಚೆಯಾಗಬೇಕು. ಅದೇ ರೀತಿಯಲ್ಲಿ ಜನರೂ ಕೂಡ ಇಂಥ ಹೇಳಿಕೆಗಳಿಂದ ಉಂಟಾಗಿರತಕ್ಕಂಥ ದ್ವಂದ್ವದ ತೀರ್ಪು ಏನಾಗುತ್ತದೆ ಎಂದು ನೋಡುವಂಥ ಸಂದರ್ಭದಲ್ಲಿ ಸಭಾನಾಯಕರೊಂದಿಗೆ

ಚರ್ಚೆ ಮಾಡಿ ಅದಕ್ಕೆ ವಿಶೇಷವಾದಂಥ ಕಾಲವನ್ನು ನಿಗದಿ ಮಾಡತಕ್ಕಂಥಾದ್ದು ಸೂಕ್ತ ಎಂಬ ಅಭಿಪ್ರಾಯವನ್ನು ತಮ್ಮಲ್ಲಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ನಿಯಮ 191-192 ಕಳಗೆ, ನನಗೆ ಸೂಚನೆಯನ್ನು ಕೊಟ್ಟಾಗ ನಮ್ಮ ನಿಯಮಾವಳಿಗಳಿಗೆ ಅನುಸಾರವಾಗಿ ಆ ವಿಚಾರದ ಮೇಲೆ ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸಲು ನಾನು ಅವಕಾಶ ಮಾಡಿಕೊಡಬೇಕಾಗುತ್ತದೆ. ಮಾನ್ಯ ಸದಸ್ಯರುಗಳಾದ ಶ್ರೀ ನಂಜೇಗೌಡರು, ಶ್ರೀ ವಾಟಾಳ್‌ನಾಗರಾಜ್‌ರವರು ಮತ್ತು ಇನ್ನಿತರ ಸ್ನೇಹಿತರುಗಳು ಏನು ಸೂಚನೆಗಳನ್ನು ಕೊಟ್ಟಿದ್ದಾರೆ, ಅದು ನನ್ನ ಕಚೇರಿಯನ್ನು ತಲುಪಿದೆ. ನಿಮ್ಮ ಪ್ರಾಸ್ತಾವಿಕ ಮನವಿಯನ್ನು ಸಹ ನಾನು ಕೇಳಿದ್ದೇನೆ. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯು ಪೂರ್ಣಗೊಂಡ ನಂತರ, ಇದಕ್ಕೆ ತಮ್ಮೆಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಸಮಯವನ್ನು ನಿಗದಿ ಮಾಡಿ ವಿಚಾರಪನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ- ಎಂದಷ್ಟೇ ಹೇಳಿ, ಮೊನ್ನೆ ಕಬ್ಬನ್ ಪಾರ್ಕ್‌ನ ವಿಚಾರದಲ್ಲಿ ಸದನದಲ್ಲಿ ಚರ್ಚೆಯಾಗುವ ವೇಳೆಗೆ ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಆಡಿರತಕ್ಕಂಥ ಕೆಲವು ಮಾತುಗಳು ಆಕ್ಷೇಪಾರ್ಹವಾಗಿರುವಂಥಾದ್ದು ಆಗಿರುವುದರಿಂದ ಅವುಗಳನ್ನು ಕಡತದಿಂದ ತೆಗೆಯಬೇಕೆಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ. ಆ ಸಮಯಕ್ಕೆ ಜಾಗೃತನಾಗಿದ್ದು ಆ ಕೆಲಸವನ್ನು ಮಾಡಬೇಕಾಗಿತ್ತು. ಈಗ ಆ ನಿರ್ಣಯವನ್ನು ತೆಗೆದುಕೊಂಡಿದ್ದೇನೆ. ಅದನ್ನು ಸದನಕ್ಕೆ ತಿಳಿಸುತ್ತೇನೆ. ಯಾವ ಮಾತುಗಳನ್ನು ಕಡತದಿಂದ ತೆಗೆದಿದ್ದೇನೆ ಎಂಬ ಬಗ್ಗೆ ನಾನು ಕಚೇರಿಗೆ ಸೂಚನೆಗಳನ್ನು ಕೊಟ್ಟಿದ್ದೇನೆ. ಈ ವಿಚಾರವನ್ನು ಇನ್ನು ಹೆಚ್ಚು ಬೆಳೆಸುವುದು ಬೇಡ. ವಿಶೇಷವಾಗಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಾಗ ಎಲ್ಲಾ ಸದಸ್ಯರುಗಳಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವಿರುತ್ತದೆ. ಉಳಿದಂತೆ ಎಲ್ಲಾ ಹೇಳಿಕೆಗಳು, ಬರಹಗಳು, ಸಂದರ್ಶನಗಳನ್ನು ನಾನೂ ಸಹ ಗಮನಿಸಿದ್ದೇನೆ. ಒಮ್ಮೆ ಗ್ರೇಟ್‌ಬ್ರಿಟನ್‌ನ ಮುಖ್ಯ ನ್ಯಾಯಾಧೀಶರಿಗೆ ಎಂಥವರನ್ನು ನೀವು ನ್ಯಾಯಾಧೀಶರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತೀರಿ ಎಂಬ ಪ್ರಶ್ನೆಯನ್ನು ಕೇಳಿದಾಗ (Whom would you like to Pick as a Judge), "He should be a gentleman from the Bar and enough if he knows little law" ಎಂದು ಹೇಳುತ್ತಾರೆ. ನಾನು ಅದಕ್ಕಿಂತ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಮಾನ್ಯ ಅರಗ ಜ್ಞಾನೇಂದ್ರರವರು ತಮ್ಮ ಚರ್ಚೆಯನ್ನು ಪ್ರಾರಂಭ ಮಾಡಿ.